ಮಲ್ಲಿಕಾರ್ಜುನ, ಸುರಧೇನುಪುರ
ಹೆಣ್ಣಿಗೆ ಆಕಾರ ಮುಖ್ಯವೋ, ಅಲಂಕಾರ ಮುಖ್ಯವೋ?



ಅವಳ ಆಕಾರ, ಅಲಂಕಾರ ಮುಖ್ಯವಾದುದು ಗಂಡಿಗೇ. ಅವಳಿಗೆ ಆಚಾರವಷ್ಟೇ ಸಾಕು.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಸನ್ಯಾಸಿವೇಷದ ರಾವಣನಿಗೂ ಸಮಾನತೆ ವೇಷದ ರಾಜಕಾರಣಿಗೂ ವ್ಯತ್ಯಾಸವೇನು?
ಅವನು ಭವತಿ ಭಿಕ್ಷಾಂ ದೇಹಿ ಎಂದ. ಇವನು ಭವತ್ಯೈ ಭಿಕ್ಷಾಪಾತ್ರಂ ದದಾಮಿ ಎನ್ನುತ್ತಾನೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ರಕ್ತವಿಲ್ಲದೆ ದೇಹವು ಬದುಕಲು ಸಾಧ್ಯವೆ?
ಬದುಕುತ್ತವಲ್ಲಾ... ಅಮೀಬಾ, ಹೈಡ್ರಾ, ಜೆಲ್ಲಿಫಿಷ್, ಶಿಲೀಂಧ್ರಗಳು, ಸಸ್ಯಗಳು...

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಆಟೋಗ್ರಾಫ್‌ಗೂ ಫೋಟೊಗ್ರಾಫ್‌ಗೂ ಇರುವ ವ್ಯತ್ಯಾಸವೇನು?



ಅದು ಹಸ್ತಾಕ್ಷರ; ಇದು ಹಸಿತದ ವಿವಿಧ ಸ್ತರ.

ಜಗದೀಶ ಬಿ. ಹೊಸೂರು, ಮೈಸೂರು
ಟೀವಿ ಜಾಹೀರಾತಿಗೂ ಪತ್ರಿಕೆಯ ಜಾಹೀರಾತಿಗೂ ಇರುವ ವ್ಯತ್ಯಾಸವೇನು?
ಪತ್ರಿಕೆಯದು ಬಿಟ್ಟಾಗಷ್ಟೇ ಸುರಿವ ನಲ್ಲಿ; ಟೀವಿಯದು ತೊಟತೊಟನೆ ಸೋರುವ ನಲ್ಲಿ.

ಜಿ. ಸುಬ್ರಹ್ಮಣ್ಯ, ಬೆಂಗಳೂರು
ಹೆಸರಿಗೆ ಧರ್ಮರಾಯನಾದರೂ ಕುದುರೆಯನ್ನು ಬಲಿಕೊಡುವ ಅಶ್ವಮೇಧಯಾಗವನ್ನೇಕೆ ಮಾಡಿದ?
ಚದುರೆಯನ್ನು ಪಣಕ್ಕಿಟ್ಟಾಗ ಇದ್ದ ಆತ್ಮವಿಶ್ವಾಸವೇ ಕುದುರೆಯನ್ನು ಒಡ್ಡಿದಾಗಲೂ ಇತ್ತಂತೆ.

ಮೋಹನರಾಜು ಎಸ್.ಎ. ಶಂಕರಘಟ್ಟ
ಆಗೋದೆಲ್ಲಾ ಒಳ್ಳೆಯದಕ್ಕೇ ಎನ್ನುವುದು ಸರಿಯೆ?
ಸರಿಯೇ. ಕೆಲವೊಮ್ಮೆ ನಮಗೆ, ಕೆಲವೊಮ್ಮೆ ನಮ್ಮ ಶತ್ರುವಿಗೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ರಾಮನ ಕಾಲ ರಾಮರಾಜ್ಯ. ಭ್ರಷ್ಟರ ಕಾಲ?
ಕೊಳ್ಳೇಗಾಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ರೇಷನ್ ಕಾರ್ಡಿಗೆ ಹತ್ತು ಲೀಟರ್ ಬಿಯರ್ ಕೊಡುವುದಾಗಿ ಸರ್ಕಾರ ಘೋಷಿಸಿದರೆ?
ಐದು ಲೀಟರ್ ಬದಲು ಕಳ್ಳೇಬೀಜ, ಆಮ್ಲೆಟ್, ಉಪ್ಪಿನಕಾಯಿ ಕೇಳುತ್ತಾರೆ.

ಬಿ.ಎಸ್. ನಾರಾಯಣಸ್ವಾಮಿ, ಬಿ.ಹೊಸಹಳ್ಳಿ
ಹೊಸ ವರ್ಷಕ್ಕೆ ಪ್ರೇಯಸಿಗೆ ಏನು ಕೊಡಲಿ?
ಡೇಟಿಂಗ್ ದಿನಗಳನ್ನು ಮಾರ್ಕ್ ಮಾಡಿಕೊಡಲು ಒಂದು ಕ್ಯಾಲೆಂಡರ್.

ದೇವೇಂದ್ರ, ಕಡೂರು
ಹಣ ಇದ್ದವರಿಗಿಂತ ಇಲ್ಲದವರೇ ನೆಮ್ಮದಿಯಾಗಿ ಇದ್ದಾರಂತಲ್ಲ?
ತೆರಿಗೆ, ನೌಕರರ ಸಂಬಳ, ಬ್ಲ್ಯಾಕ್‌ಮನಿ, ಸಿಬಿಐ ರೈಡ್, ಕಳ್ಳರು, ಹ್ಯಾಕಿಂಗ್ ಇತ್ಯಾದಿಗಳ ಚಿಂತೆ ಇಲ್ಲವಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
ನರ್ತಿಸುವುದು ಮಯೂರ. ಬಿರುದು ಮಾತ್ರ ಮಯೂರಿಗೆ. ಇದು ಅನ್ಯಾಯವಲ್ಲವೆ?
ಗತಕಾಲದ ವಿಧಿಗಳೇ ಹಾಗೆ. ದುಡಿಯುತ್ತಿದ್ದವನು ಗಂಡು; ಸಂಬಳ ಅಮ್ಮಾವ್ರ ಪಾಲು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಜನರಿಗೆ ಸರಕಾರ ಸಹಕಾರ ನೀಡದಿದ್ದರೆ ಏನಾಗುತ್ತದೆ?
ಬೈದುಕೊಂಡಾದರೂ ಕಟ್ಟಬೇಕಾದ ಟ್ಯಾಕ್ಸನ್ನು ಕಟ್ಟುತ್ತಾರೆ.

## ವಾರದ ಪ್ರಶ್ನೆ

ಡಾ. ತಿಮ್ಮರಾಜು, ದಾವಣಗೆರೆ
ನುಡಿದಂತೆ ನಡೆಯುವವರು ಯಾವಾಗ ಬರುತ್ತಾರೆ ರಾಮ್‌ಜೀ?
ಪ್ರತಿ ತಡರಾತ್ರಿ ಬಾರಿನಿಂದ. ಅವರ ನುಡಿ, ನಡೆ ಎರಡೂ ಅಡ್ಡಾದಿಡ್ಡಿಯೇ.

ಕೆ.ವಿ. ಗೋವಿಂದಾಚಾರಿ, ಮೈಸೂರು
ವರಮಹಾಲಕ್ಷ್ಮಿ ವ್ರತವನ್ನು ವಿಜೃಂಭಣೆಯಿಂದ ಆಚರಿಸುವವರು ಸರಸ್ವತಿಪೂಜೆಯನ್ನು ಸರಳವಾಗಿ ಆಚರಿಸುವುದೇಕೆ?
ದುಡ್ಡು ಗರ್ವವನ್ನು ಪೋಷಿಸುತ್ತದೆ; ವಿದ್ಯೆ ಸರಳತೆಯನ್ನು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ಗೊತ್ತಾಗಬಾರದಂತೆ. ಏಕೆ?
ಗೊತ್ತಾದರೆ ಬಲಗೈಯೊಡನೆ ಸೇರಿ ಚಪ್ಪಾಳೆ ತಟ್ಟಿ ಊರಿಗೆಲ್ಲ ಟಾಂಟಾಂ ಮಾಡಿಬಿಡುತ್ತಂತೆ.

ವಿ.ಹೇಮಂತಕುಮಾರ್, ಬೆಂಗಳೂರು
ಹಣ್ಣುಗಳ ರಾಜ ಮಾವಿನ ಹಣ್ಣು. ಹಣ್ಣುಗಳ ರಾಣಿ?



ದೇಹ ಒಣಗಿದರೂ ರಸಭರಿತತೆ ಕಾಪಾಡಿಕೊಳ್ಳುವ ದ್ರಾಕ್ಷಿ!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಒಳ್ಳೆಯ ದಿನಗಳು ಬರುವುದಕ್ಕೆ ಕಷ್ಟದ ದಿನಗಳನ್ನು ಎದುರಿಸಲೇಬೇಕೆ?
ಹಾಗೇನಿಲ್ಲ. ಮಂತ್ರಿವಂಶಜನಾದರೆ ಅಹಂಕಾರದಲ್ಲೇ ಹುಟ್ಟಿ ಅಲಂಕಾರದಲ್ಲೇ ಬದುಕಬಹುದು.

ಸುಶೀಲಾ ಎಸ್. ಪಾಟೀಲ ಸಂಕೇಶ್ವರ
ಗಂಡ ಹೆಂಡತಿ ಜಗಳವಾಡಿದರೆ ನಾನು ತವರಿಗೆ ಹೋಗುತ್ತೇನೆ ಎನ್ನುತ್ತಾಳೆ ಆಕೆ. ಆದರೆ ಅವನು?
ಐದು ನಿಮಿಷ ಟೈಮ್ ಕೊಡು. ನಾನೂ ರೆಡಿ ಆಗಿ ಬರ್ತೀನಿ ಅಂತಾನೆ

■ ರಾಮ್